**GOVERNMENT OF KARNATAKA**

**KARNATAKA LOKAYUKTA**

No.UPLOK-2/DE/116/2020/ARE-14

Multi Storied Building,
Dr. B.R. Ambedkar Veedhi,
Bengaluru-560001
Date: 25th May, 2022.

## RECOMMENDATION

Sub: Departmental Inquiry against Sriyuths:
(1) M.Rajanna, Municipal Commissioner (Originally Community Affairs Officer), City Municipal Council, Chamarajanagara.
(2) M.G.Ramesh, Manager, Purasabhe, Gundlupete, Chamarajanagara District–reg.,

Ref: 1) Government Order No.ನಅಇ 79 ಡಿಎಂಕೆ 2019, Bengaluru, dated: 26/05/2020.

2) Nomination Order No.UPLOK-2/DE/116/ 2020, Bengaluru, dated: 05/06/2020 of Upalokayukta, State of Karnataka, Bengaluru.

3) Inquiry Report dated: 23/05/2022 of Additional Registrar of Enquiries-14, Karnataka Lokayukta, Bengaluru.

*****

The Government by its order dated: 26/05/2020 initiated the disciplinary proceedings against (1) M.Rajanna, Municipal Commissioner (Originally Community Affairs Officer), City Municipal Council, Chamarajanagara and, (2) M.G.Ramesh, Manager, Purasabhe, Gundlupete, Chamarajanagara District (hereinafter referred to as Delinquent Government Officials, for

short as DGO Nos.1 and 2) and entrusted the Departmental Inquiry to this Institution.

2. This Institution by Nomination Order No.UPLOK-2/DE/116/2020, Bengaluru, dated: 05/06/2020 nominated Additional Registrar of Enquiries-14, Karnataka Lokayukta, Bengaluru, as the Inquiry Officer to frame charges and to conduct Departmental Inquiry against DGO Nos.1 and 2 for the alleged charge of misconduct, said to have been committed by them.

3. The DGO No.1, M.Rajanna, Municipal Commissioner (Originally Community Affairs Officer), City Municipal Council, Chamarajanagara and DGO No.2, M.G.Ramesh, Manager, Purasabhe, Gundlupete, Chamarajanagara District were tried for the following charges:

**<u>ಅನುಬಂಧ–1</u>**

**<u>ದೋಷಾರೋಪಣೆ</u>**

ಆಪಾದಿತ ಸರ್ಕಾರಿ ನೌಕರ–1 ರವರಾದ ಎಂ.ರಾಜಣ್ಣ, ಪೌರಾಯುಕ್ತರು, ನಗರಸಭೆ, ಚಾಮರಾಜನಗರ, ನೀವು ದಿನಾಂಕ: 21/06/2016 ರಿಂದ 23/11/2017 ರವರೆಗೆ ಕಾರ್ಯ ನಿರ್ವಹಿಸಿದ್ದು, ಆ.ಸ.ನೌಕರ–2 ರವರಾದ ಶ್ರೀ ಎಂ.ಜಿ.ರಮೇಶ್, ವ್ಯವಸ್ಥಾಪಕರು, ಪುರಸಭೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ, ದಿನಾಂಕ: 25/08/2015 ರಿಂದ 21/06/2016 ರವರೆಗೆ ಕಾರ್ಯ ನಿರ್ವಹಿಸಿದ್ದು, 2016–17ನೇ ಸಾಲಿನ ಕಾರ್ಮಿಕರ ಕಲ್ಯಾಣ ಕರಗಳನ್ನು ಸಂಬಂಧಿಸಿದ ಇಲಾಖೆಗೆ ಅದೇ ಸಾಲಿನಲ್ಲಿ ಜಮೆ ಮಾಡದೇ, ಲೆಕ್ಕ ಪರಿಶೋಧನೆಗೆ ಅಗತ್ಯ ದಾಖಲೆಗಳನ್ನು ಹಾಜರುಪಡಿಸದೇ ಒಟ್ಟು ರೂ.12,28,550/– ಗಳನ್ನು ಅದೇ ಸಾಲಿನಲ್ಲಿ ಜಮೆ ಮಾಡದೇ ತಮ್ಮ ಹುದ್ದೆಯ

ಅಧಿಕಾರ ದುರುಪಯೋಗ ಪಡಿಸಿಕೊಂಡು, ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯತೆ ತೋರಿ, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1)(i) ರಿಂದ (iii) ರನ್ವಯ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

4. The Inquiry Officer (Additional Registrar of Enquiries-14) on proper appreciation of oral and documentary evidence has held that, the Disciplinary Authority has 'partly proved' the charges leveled against DGO No.1, M.Rajanna, Municipal Commissioner (Originally Community Affairs Officer), City Municipal Council, Chamarajanagara and DGO No.2, M.G.Ramesh, Manager, Purasabhe, Gundlupete, Chamarajanagara District.

5. On perusal of the Inquiry Report, in order to prove the guilt of the DGO Nos.1 and 2, the Disciplinary Authority has examined one witness i.e., PW-1 and Ex. P-1 to P-6 documents were marked. In fact, DGO Nos.1 and 2 were examined as DW-1 and DW-2 respectively and Ex. D-1 to Ex. D-7 documents were marked.

6. On careful perusal of the entire documentary and oral evidence, the disciplinary authority has made allegations and proved the same only to the extent that, the DGOs 1 and 2 are responsible for collection of Rs.1,36,990/- towards various fee etc. There is no

allegation that they have misappropriated the same for their personal use, however, it is established that the said amount though collected in the year 2016 and 2017, but not deposited to the particular account till 2020 and 2022. It appears there is no explanation by the DGOs 1 and 2 where that amount was during that particular period, but the said amount has been in a delayed manner deposited to the concerned account. In view of the same the disciplinary authority has proved the said aspect.

7. On re-consideration of Inquiry Report and taking note of the totality of the circumstances of the case, I do not find any reason to interfere with the findings recorded by the Inquiry Officer. Therefore, it is hereby recommended to the Government to accept the report of Inquiry Officer.

8. As per the First Oral Statement of DGO Nos.1 and 2 furnished by the Inquiry Officer, DGO No.1 is due to retire from service on 31/07/2028 and DGO No.2 has already retired from service on 31/05/2020.

9. Having regard to the nature of charge 'proved' against DGO No.1, M.Rajanna, Municipal Commissioner (Originally Community Affairs Officer), City Municipal Council, Chamarajanagara and DGO No.2, M.G.Ramesh, Manager, Purasabhe, Gundlupete,

Chamarajanagara District and on consideration of the totality of circumstances:-

i. 'It is hereby recommended to the Government to impose penalty of withholding two annual increments to DGO No.1, M.Rajanna, Municipal Commissioner (Originally Community Affairs Officer), City Municipal Council, Chamarajanagara, with cumulative effect".

ii. 'It is hereby recommended to the Government to impose penalty of 'withholding 5% of pension for a period of two years payable to DGO No.2, M.G.Ramesh, Manager, Purasabhe, Gundlupete, Chamarajanagara District".

10. Action taken in the matter shall be intimated to this Authority.

Connected records are enclosed herewith.

K.N. Phaneendra 25/5/22

**(JUSTICE K.N.PHANEENDRA)**
UPALOKAYUKTA-2,
STATE OF KARNATAKA.

# ಕರ್ನಾಟಕ ಲೋಕಾಯುಕ್ತ

ನಂ.ಉಪಲೋಕ್-2/ಡಿಇ-116/2020/ಎ.ಆರ್.ಇ-14

ಡಾ॥ ಬಿ.ಆರ್.ಅಂಬೇಡ್ಕರ್ ವೀದಿ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು-560001,
ದಿನಾಂಕ: 23/05/2022.

## ವಿಚಾರಣಾ ವರದಿ

**ಉಪಸ್ಥಿತರು: ಸುದೇಶ್ ರಾಜಾರಾಮ್ ಪರದೇಶಿ,**
ಅಪರ ನಿಬಂಧಕರು ವಿಚಾರಣೆಗಳು-14,
ಕರ್ನಾಟಕ ಲೋಕಾಯುಕ್ತ, ಬೆಂಗಳೂರು.

**ವಿಷಯ:** ಆ.ಸ.ನೌ – (1) ಶ್ರೀ. **ಎಂ ರಾಜಣ್ಣ,** ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ), ನಗರಸಭೆ, ಚಾಮರಾಜನಗರ ಮತ್ತು (2) ಶ್ರೀ. **ಎಂ.ಜಿ ರಮೇಶ್,** ವ್ಯವಸ್ಥಾಪಕರು, ಪುರಸಭೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಇವರುಗಳ ವಿರುದ್ಧದ ಇಲಾಖಾ ವಿಚಾರಣೆ ಕುರಿತು.

**ಉಲ್ಲೇಖ:**
1. ಕಂಪ್ಲೆಂಟ್/ಉಪಲೋಕ್/ಎಂವೈಎಸ್/100/2019/ಪಿಪಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ ದಿನಾಂಕ: 11/10/2019.
2. ಸರ್ಕಾರದ ಆದೇಶ ಸಂಖ್ಯೆ: ನಅಇ 79 ಡಿಎಂಕೆ 2019, ಬೆಂಗಳೂರು, ದಿನಾಂಕ: 26/05/2020.
3. ನಾಮನಿರ್ದೇಶನ ಸಂಖ್ಯೆ.ಉಪಲೋಕ್-2/ಡಿಇ/ 116/2020, ಬೆಂಗಳೂರು ದಿನಾಂಕ: 05/06/2020.

* * * * * *

ಈ ದೂರನ್ನು, ದೂರುದಾರರಾದ ಶ್ರೀ. **ಕೆ.ಎಲ್ ಲಿಂಗರಾಜು** ಬಿನ್ ಲೇಟ್ ಲಿಂಗನಾಯಕ, ಕುನಗಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ರವರು ಆಪಾದಿತ ಸರ್ಕಾರಿ ನೌಕರ (1) ಶ್ರೀ. **ಎಂ ರಾಜಣ್ಣ,** ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ), ನಗರಸಭೆ, ಚಾಮರಾಜನಗರ ಮತ್ತು (2) ಶ್ರೀ. **ಎಂ.ಜಿ ರಮೇಶ್,** ವ್ಯವಸ್ಥಾಪಕರು, ಪುರಸಭೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಇವರುಗಳ ವಿರುದ್ಧ

ಸಲ್ಲಿಸಿರುತ್ತಾರೆ, ತಮ್ಮ ದೂರಿನಲ್ಲಿ 2016-17ನೇ ಸಾಲಿನಲ್ಲಿ ಕಾರ್ಮಿಕ ಕಲ್ಯಾಣ ಕರವನ್ನು ಸಂಗ್ರಹಿಸಿ ಇಲಾಖೆಗೆ ಅದೇ ಸಾಲಿನಲ್ಲಿ ಜಮಾ ಮಾಡದೇ, ಲೆಕ್ಕ ಪರಿಶೋಧನೆಗೆ ಅಗತ್ಯ ದಾಖಲಾತಿಗಳನ್ನು ಹಾಜರುಪಡಿಸದೇ ಒಟ್ಟು ರೂ.12,28,500/-ಗಳನ್ನು ದುರುಪಯೋಗ ಪಡಿಸಿಕೊಂಡಿರುತ್ತಾರೆ ಅಂತಾ ಹೇಳಿರುತ್ತಾರೆ. ಆದ್ದರಿಂದ, ಆ.ಸ.ನೌ ರವರುಗಳ ವಿರುದ್ಧ ಕ್ರಮ ತೆಗೆದುಕೊಳ್ಳಲು ತಿಳಿಸಿರುತ್ತಾರೆ.

2. ತದನಂತರ, ಸರ್ಕಾರಕ್ಕೆ ಕರ್ನಾಟಕ ಲೋಕಾಯುಕ್ತ ಅಧಿನಿಯಮದ ಕಲಂ 12(3)ರಡಿಯಲ್ಲಿ ಉಲ್ಲೇಖ (1)ರಲ್ಲಿ ಕಾಣಿಸಿದಂತೆ, ವರದಿ ಸಲ್ಲಿಸಿದ್ದು, ಸದರಿ ವರದಿಯನ್ವಯ ಕರ್ನಾಟಕ ಸರ್ಕಾರವು ಉಲ್ಲೇಖ (2)ರಲ್ಲಿ ಕಾಣಿಸಿದಂತೆ, ದಿನಾಂಕ: 26/05/2020 ರ ಆದೇಶದಂತೆ, ಮಾನ್ಯ ಉಪಲೋಕಾಯುಕ್ತ ರವರಿಗೆ ವಿಚಾರಣೆ ಮಾಡಿ ವರದಿ ಸಲ್ಲಿಸುವಂತೆ ಕೋರಿದ್ದು, ಮಾನ್ಯ ಉಪಲೋಕಾಯುಕ್ತ ರವರು ದಿನಾಂಕ: 05/06/2020 ರಂದು ಅಪರ ನಿಬಂಧಕರು, ವಿಚಾರಣೆಗಳು-14 ರವರಿಗೆ ವಿಚಾರಣೆ ಮಾಡಿ, ವರದಿ ಸಲ್ಲಿಸುವಂತೆ ಉಲ್ಲೇಖ (3)ರಲ್ಲಿ ಕಾಣಿಸಿದಂತೆ ನಾಮನಿರ್ದೇಶನ ಮಾಡಿರುತ್ತಾರೆ.

3. ನಾಮನಿರ್ದೇಶನದ ಆದೇಶದಂತೆ, ಆ.ಸ.ನೌ.ರವರುಗಳ ವಿರುದ್ಧ ದೋಷಾರೋಪಣೆ ***(Articles of Charge)*** ಅನ್ನು ಅಪರ ನಿಬಂಧಕರು, ವಿಚಾರಣೆಗಳು-14 ರವರು ರಚಿಸಿದ್ದು, ಸದರಿ ದೋಷಾರೋಪಣೆಯು ಅನುಬಂಧ-1 ಮತ್ತು ಅನುಬಂಧ-2 ರೊಂದಿಗೆ ದುರ್ನಡತೆ ಮತ್ತು ಕರ್ತವ್ಯಲೋಪಕ್ಕೆ ಸಂಬಂಧಪಟ್ಟಂತೆ, ವಿವರಗಳುಳ್ಳ ಆರೋಪವನ್ನು ಆ.ಸ.ನೌರವರುಗಳಿಗೆ ದಿನಾಂಕ: 06/08/2020 ರಂದು ಈ ಕೆಳಕಂಡಂತೆ ಕಳುಹಿಸಲಾಗಿರುತ್ತದೆ.

## ಅನುಬಂಧ-1

## ದೋಷಾರೋಪಣೆ-1

ಆ.ಸ.ನೌ.1, ಎಂ.ರಾಜಣ್ಣ, ಪೌರಾಯುಕ್ತರು, ನಗರಸಭೆ, ಚಾಮರಾಜನಗರ, ನೀವು ದಿನಾಂಕ: 21/06/2016 ರಿಂದ 23.11.2017 ರವರೆಗೆ

ಕಾರ್ಯ ನಿರ್ವಹಿಸಿದ್ದು, ಆ.ಸ.ನೌ.2 ಆದ ಶ್ರೀ ಎಂ.ಜಿ.ರಮೇಶ್, ವ್ಯವಸ್ಥಾಪಕರು, ಪುರಸಭೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ದಿ: 25.08.2015 ರಿಂದ 21.6.2016 ರವರೆಗೆ ಕಾರ್ಯ ನಿರ್ವಹಿಸಿದ್ದು, 2016–17ನೇ ಸಾಲಿನ ಕಾರ್ಮಿಕರ ಕಲ್ಯಾಣ ಕರಗಳನ್ನು ಸಂಬಂಧಿಸಿದ ಇಲಾಖೆಗೆ ಅದೇ ಸಾಲಿನಲ್ಲಿ ಜಮೆ ಮಾಡದೇ, ಲೆಕ್ಕ ಪರಿಶೋಧನೆಗೆ ಅಗತ್ಯ ದಾಖಲೆಗಳನ್ನು ಹಾಜರುಪಡಿಸದೇ ಒಟ್ಟು ರೂ.12,28,550/– ಗಳನ್ನು ಅದೇ ಸಾಲಿನಲ್ಲಿ ಜಮೆ ಮಾಡದೇ ತಮ್ಮ ಹುದ್ದೆಯ ಅಧಿಕಾರ ದುರುಪಯೋಗಪಡಿಸಿಕೊಂಡು, ಕರ್ತವ್ಯ ನಿರ್ವಹಣೆಯಲ್ಲಿ ನಿರ್ಲಕ್ಷ್ಯತೆ ತೋರಿ, ನಿಮ್ಮ ಕರ್ತವ್ಯ ಪಾಲನೆಯಲ್ಲಿ ಸಂಪೂರ್ಣ ಪ್ರಾಮಾಣಿಕತೆ ಹಾಗೂ ಕರ್ತವ್ಯ ನಿಷ್ಠೆಯನ್ನು ಪಾಲಿಸದೇ ಮತ್ತು ಸರ್ಕಾರಿ ನೌಕರರಿಗೆ ಉಚಿತವಲ್ಲದ ರೀತಿಯಲ್ಲಿ ನಡೆದುಕೊಂಡು, ದುರ್ನಡತೆ/ದುರ್ವರ್ತನೆಯಿಂದ ವರ್ತಿಸಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ ಉಕ್ತವಾದ ದುರ್ನಡತೆ ಎಸಗಿದ್ದೀರಿ ಎಂದು ನಿಮ್ಮ ಮೇಲೆ ದೋಷಾರೋಪಣೆಯನ್ನು ಮಾಡಲಾಗಿದೆ.

## ಅನುಬಂಧ–2

## ದೋಷಾರೋಪಣೆಯ ವಿವರ

## (ಸ್ಟೇಟ್‌ಮೆಂಟ್ ಆಫ್ ಇಂಪ್ಯೂಟೇಷನ್ ಆಫ್ ಮಿಸ್‌ಕಾಂಡೆಕ್ಟ್)

3. ದೂರಿನ ಸಂಕ್ಷಿಪ್ತ ಸಾರಾಂಶ:–

2016–17ನೇ ಸಾಲಿನಲ್ಲಿ ಕಾರ್ಮಿಕ ಕಲ್ಯಾಣ ಕರವನ್ನು ಸಂಗ್ರಹಿಸಿ ಎದುರುದಾರರು ದುರುಪಯೋಗ ಪಡಿಸಿಕೊಂಡಿರುತ್ತಾರೆ. ಸದರಿ ಹಣವನ್ನು

B.

ಎದುರುದಾರರಿಂದ ವಸೂಲಿ ಮಾಡಿಸಿ ಸರ್ಕಾರದ ಖಜಾನೆಗೆ ಜಮಾ ಮಾಡಲು ಆದೇಶಕ್ಕಾಗಿ ದೂರು ಸಲ್ಲಿಸಿರುತ್ತಾರೆ.

4. **1ನೇ ಎದುರುದಾರರ ಆಕ್ಷೇಪಣೆಗಳು:–**

ನಗರಸಭೆಯಿಂದ ಕಟ್ಟಡ ಪರವಾನಗಿ ನೀಡುವಾಗ ಸರ್ಕಾರಕ್ಕೆ ಪಾವತಿಸಬೇಕಾದ ಕಾರ್ಮಿಕ ಕಲ್ಯಾಣ ಕರವನ್ನು ವಸೂಲಿಸಿದ ಬಗ್ಗೆ ಆಕ್ಷೇಪಣೆಗಳನ್ನು ಸಲ್ಲಿಸಲಾಗಿದೆ.

ನಗರಸಭೆಯು 2016–17ನೇ ಸಾಲಿನ ಲೆಕ್ಕಪರಿಶೋಧನೆಯನ್ನು ಕೈಗೊಂಡು ಲೆಕ್ಕತನಿಖಾ ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯ ಕಂಡಿಕೆ–19 ರಲ್ಲಿ ಪರವಾನಗಿ ಅರ್ಜಿದಾರರಿಂದ ಕೊಳಚೆ ನಿರ್ಮೂಲನಾ ಕರ ರೂ. 38,450/– ಚೂಡಾ (ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರ) ಶುಲ್ಕ ರೂ. 98,540/– ಹಾಗೂ ಕಾರ್ಮಿಕ ಕಲ್ಯಾಣ ಕರ ರೂ. 10,91,560/– ಗಳನ್ನು ವಸೂಲಿ ಮಾಡಿ, ಸದರಿ ಕರಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮಾ ಮಾಡದಿರುವುದು ಕಂಡು ಬಂದಿರುವುದಾಗಿ ತಿಳಿಸಿರುತ್ತಾರೆ. ನಂತರ ಕಾರ್ಮಿಕ ಕಲ್ಯಾಣ ಕರದ ಬಾಬ್ತು ರೂ. 10,91,560/– ಗಳನ್ನು ಕಾರ್ಮಿಕ ಕಲ್ಯಾಣ ಇಲಾಖೆಗೆ ಆಕ್ಸಿಸ್ ಬ್ಯಾಂಕ್ ಲಿಮಿಟೆಡ್, ಚಾಮರಾಜನಗರ ಶಾಖೆಯಿಂದ ಪಡೆಯಲಾಗಿರುವ ಡಿ.ಡಿ. ಸಂಖ್ಯೆ: 010748, ದಿನಾಂಕ: 20/06/2017 ರ ಮೂಲಕ ಪಾವತಿಸಿರುವ ಬಗ್ಗೆ ಮಾಹಿತಿಯನ್ನು ಲೆಕ್ಕ ತಪಾಸಣೆಗೆ ಒದಗಿಸಲಾಗಿರುತ್ತದೆ ಎಂದು ನಮೂದಿಸಿರುತ್ತಾರೆ.

5. 2016–17ನೇ ಸಾಲಿನ ಕರ ವಸೂಲಿ ಮಾಡಿದ ಅವಧಿಯಲ್ಲಿ ಕರ್ತವ್ಯ ನಿರ್ವಹಿಸದ ಪೌರಾಯುಕ್ತರ ಹೆಸರು ಈಗಿನ ವಿಳಾಸಗಳನ್ನು 1ನೇ ಎದುರುದಾರರಿಂದ ಪಡೆಯಲಾಗಿರುತ್ತದೆ.

6. 2016–17 ರಲ್ಲಿ ಎಂ.ಜಿ. ರಮೇಶ್, ವ್ಯವಸ್ಥಾಪಕರು, ಪುರಸಭೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಇವರು ದಿನಾಂಕ: 25/08/2015ರಿಂದ 21/06/2016 ರವರೆಗೆ ಹಾಗೂ 1ನೇ ಎದುರುದಾರರು ದಿನಾಂಕ: 21/06/2016 ರಿಂದ 23/11/2017 ರವರೆಗೆ ಪೌರಾಯುಕ್ತರಾಗಿ ಕಾರ್ಯ ನಿರ್ವಹಿಸಿರುವುದಾಗಿ ಮಾಹಿತಿ ಸಲ್ಲಿಸಿರುತ್ತಾರೆ.

7. **ಎರಡನೇ ಎದುರುದಾರರ ಆಕ್ಷೇಪಣೆಗಳು:–**

ಚಾಮರಾಜನಗರ ನಗರಸಭೆಯಲ್ಲಿ ಆಗಸ್ಟ 2015 ರಿಂದ 23/06/2016 ರವರೆಗೆ ಪೌರಾಯುಕ್ತರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ಸದರಿ ಅವಧಿಯಲ್ಲಿ ಆರ್.ಟಿ.ಐ. ಅರ್ಜಿ ಸಲ್ಲಿಸಿರುವುದಿಲ್ಲ. ವರ್ಗಾವಣೆ ಹೊಂದಿರುವುದರಿಂದ ಯಾವುದೇ ದಾಖಲಾತಿಗಳು ನನ್ನು ಬಳಿ ಲಭ್ಯವಿರುವುದಿಲ್ಲ ಎಂದು ನಮೂದಿಸಿರುತ್ತಾರೆ.

8. ಲಗತ್ತಿಸಿರುವ ದಾಖಲೆಗಳನ್ನು ಪರಿಶೀಲಿಸಲಾಗಿ 2016–17ನೇ ಸಾಲಿನಲ್ಲಿ ರೂ. 38,450/– ಗಳು ಕೊಳಚೆ ನಿರ್ಮೂಲನಾ ಕರ, ರೂ. 98,540/– ಚೂಡಾ ಕರ ಹಾಗೂ ರೂ. 10,91,560/– ಕಾರ್ಮಿಕರ ಕಲ್ಯಾಣ ಕರಗಳನ್ನು ವಸೂಲಿ ಮಾಡಿದ್ದು ಸಂಬಂಧಪಟ್ಟ ಇಲಾಖೆಗೆ ಜಮೆ ಮಾಡಲು ಸೂಚಿಸಿರುತ್ತಾರೆ. ಸದರಿ ಸೂಚನೆಯಂತೆ ಕಾರ್ಮಿಕ ಕಲ್ಯಾಣ ನಿಧಿ ಬಾಬ್ತು ರೂ. 10,91,560/– ಗಳನ್ನು ದಿನಾಂಕ: 20/06/2017 ಕ್ಕೆ ಡಿ.ಡಿ. ಸಂಖ್ಯೆ: 10748 ರ ಮೂಲಕ ಎದುರುದಾರರ ಕಛೇರಿಯಿಂದ ಕಾರ್ಮಿಕ ಕಲ್ಯಾಣ ಇಲಾಖೆಗೆ ಜಮೆ ಮಾಡಲಾಗಿದೆ. ಉಳಿದ ಕೊಳಚೆ ನಿರ್ಮೂಲನಾ ಕರ ಮತ್ತು ಚೂಡಾ ಕರ ರೂ. 1,36,990/– ಗಳನ್ನು ಚೂಡಾದಿಂದ ನಗರಸಭೆಗೆ ಬರಬೇಕಾದ ಬಾಕಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮ ಜರುಗಿಸಿರುವುದಾಗಿ

ಎದುರುದಾರರ ಕಛೇರಿಯಿಂದ ದಿನಾಂಕ: 09/11/2018 ರಂದು ಪಿರ್ಯಾದುದಾರರಿಗೆ ಮಾಹಿತಿ ನೀಡಲಾಗಿರುತ್ತದೆ.

9. ತನಿಖಾ ಅವಧಿಯಲ್ಲಿ ಸಂಗ್ರಹಿಸಿದ ಆಧಾರಗಳಿಂದ 2016-17ನೇ ಸಾಲಿನಲ್ಲಿ ಕಾರ್ಮಿಕರ ಕಲ್ಯಾಣ ಕರಗಳನ್ನು ವಸೂಲಿ ಮಾಡಿರುವುದು ಕಂಡು ಬಂದಿರುತ್ತದೆ. ಸದರಿ ಸಾಲಿನಲ್ಲಿಯೇ ಕರಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮೆ ಮಾಡದಿರುವುದನ್ನು ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 19 ರಲ್ಲಿ ನಮೂದಿಸಿರುತ್ತಾರೆ. ದಿನಾಂಕ: 29/05/2017 ರಂದು ನೋಟೀಸು ನೀಡಿದ್ದರೂ ವಿವರಗಳನ್ನು ಲೆಕ್ಕ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ ಎಂದು ನಮೂದಿಸಿರುತ್ತಾರೆ. ಕರಗಳ ಒಟ್ಟು ಮೊತ್ತ ರೂ. 12,28,550/- ಗಳನ್ನು ಸಂಬಂಧಪಟ್ಟ ಇಲಾಖೆಗಳಿಗೆ ಅದೇ ಸಾಲಿನಲ್ಲಿ ಜಮೆ ಮಾಡದೆ ಇರುವುದು ಕಂಡುಬಂದಿರುತ್ತದೆ.

10. ಆ.ಸ.ನೌ.2 ದಿನಾಂಕ: 25/08/2015 ರಿಂದ 21/06/2016 ರವರೆಗೆ ಹಾಗೂ ಆ.ಸ.ನೌ.1 ರವರು ದಿನಾಂಕ: 21/06/2016 ರಿಂದ 23/11/2017 ರವರೆಗೆ ಚಾಮರಾಜನಗರ ನಗರಸಭೆಯ ಪೌರಾಯುಕ್ತರಾಗಿ ಕಾರ್ಯನಿರ್ವಹಿಸಿದ ಬಗ್ಗೆ ತನಿಖೆಯಲ್ಲಿ ಕಂಡುಬಂದಿದ್ದು 2016-17ನೇ ಸಾಲಿನ ಕಾರ್ಮಿಕರ ಕಲ್ಯಾಣ ಕರಗಳನ್ನು ಸಂಬಂಧಿಸಿದ ಇಲಾಖೆಗೆ ಅದೇ ಸಾಲಿನಲ್ಲಿ ಜಮೆ ಮಾಡದೆ, ಲೆಕ್ಕ ಪರಿಶೋಧನೆಗೆ ಅಗತ್ಯ ದಾಖಲೆಗಳನ್ನು ಹಾಜರುಪಡಿಸದೆ ಒಟ್ಟು 12,28,550/- ರೂಗಳನ್ನು ಅದೇ ಸಾಲಿನಲ್ಲಿ ಜಮೆ ಮಾಡದೆ ತಮ್ಮ ಸ್ಥಾನದ ದುರುಪಯೋಗ ಪಡಿಸಿಕೊಂಡು ಕರ್ತವ್ಯ ಲೋಪ ಎಸಗಿರುವುದು ಕಂಡು ಬಂದಿರುತ್ತದೆ.

11. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966ರ ನಿಯಮಗಳು 3(1) (i) ರಿಂದ (iii) ರನ್ವಯ

ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಆ.ಸ.ನೌ.1 – ಶ್ರೀ ಎಂ. ರಾಜಣ್ಣ, ಆಯುಕ್ತರು, ಸಿ.ಎಂ.ಸಿ., ಕಛೇರಿ, ಚಾಮರಾಜನಗರ ತಾಲ್ಲೂಕು, ಚಾಮರಾಜನಗರ ಜಿಲ್ಲೆ, ಮತ್ತು ಆ.ಸ.ನೌ.2– ಶ್ರೀ ಎಂ.ಜಿ. ರಮೇಶ್, ವ್ಯವಸ್ಥಾಪಕರು, ಪುರಸಭೆ, ಗುಂಡ್ಲುಪೇಟೆ ತಾಲ್ಲೂಕು, ಚಾಮರಾಜನಗರ ಜಿಲ್ಲ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಕ್ರಮ ಜರುಗಿಸಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14–ಎ ರ ಅಡಿಯಲ್ಲಿ ಆ.ಸ.ನೌಕರರ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಂಡು ವರದಿ ಸಲ್ಲಿಸಲು ಗೌರವಾನ್ವಿತ ಉಪಲೋಕಾಯುಕ್ತರವರಿಗೆ ವಹಿಸಿ ಆದೇಶ ಮಾಡಿದ್ದು, ಉಪಲೋಕಾಯುಕ್ತರವರು ಇಲಾಖಾ ವಿಚಾರಣೆಗೆ ಅಪರ ನಿಬಂಧಕರು, ವಿಚಾರಣೆಗಳು–14 ರವರಿಗೆ ಆದೇಶಿಸಿರುತ್ತಾರೆ. ಆದ್ದರಿಂದ ನಿಮ್ಮ ಮೇಲೆ ಈ ದೋಷಾರೋಪಣೆ.

4. ಈ ಮೇಲ್ಕಂಡ ದೋಷಾರೋಪಣೆಯನ್ನು (ಆರ್ಟಿಕಲ್ಸ್ ಆಫ್ ಚಾರ್ಜ್) ಆ.ಸ.ನೌರವರುಗಳಿಗೆ ಕಳುಹಿಸಿದ್ದು, ಅದು ಜಾರಿಯಾದ ನಂತರ ಆ.ಸ.ನೌ–1 ರವರು ದಿನಾಂಕ: 04/11/2020 ರಂದು ಹಾಗೂ ಆ.ಸ.ನೌ–2 ರವರು ದಿನಾಂಕ: 07/10/2020 ರಂದು ಹಾಜರಾಗಿದ್ದು, ಆ.ಸ.ನೌರವರುಗಳ ಪ್ರಥಮ ಮೌಖಿಕ ಹೇಳಿಕೆ, ನಿಯಮ–11 ಕೆ.ಸಿ.ಎಸ್. (ಸಿಸಿಎ) ರೂಲ್ಸ್ ರ ಅಡಿಯಲ್ಲಿ ದಾಖಲಿಸಲಾಗಿರುತ್ತದೆ. ಆ.ಸ.ನೌರವರುಗಳು ತಪ್ಪೊಪ್ಪಿಕೊಳ್ಳದೆ, ಆರೋಪಗಳ ವಿಚಾರಣೆಯನ್ನು ಮಾಡಬಯಸಿರುತ್ತಾರೆ.

5. ಆ.ಸ.ನೌರವರುಗಳಿಗೆ ದಾಖಲೆಗಳ ಪರಿಶೀಲನೆ ಮತ್ತು ಶೋಧನೆಗಾಗಿ ಅವಕಾಶ ಕಲ್ಪಿಸಲಾಗಿರುತ್ತದೆ.

6. ಮೇಲ್ಕಂಡ ಆಪಾದನೆಗಳಿಗೆ ಸಂಬಂಧಿಸಿದಂತೆ, ಆ.ಸ.ನೌರವರುಗಳಿಂದ ಲಿಖಿತ ಹೇಳಿಕೆಯನ್ನು ಕೇಳಲಾಗಿತ್ತು.

7. ಆ.ಸ.ನೌ-1 ಮತ್ತು 2 ರವರು ತಮ್ಮ ಲಿಖಿತ ಹೇಳಿಕೆಯಲ್ಲಿ 2016-17ನೇ ಸಾಲಿನಲ್ಲಿ ರೂ.10,91,560/- ಕಾರ್ಮಿಕ ಕಲ್ಯಾಣ ಕರವನ್ನು ವಸೂಲಿ ಮಾಡಿದ್ದು, ಸದರಿ ಹಣವನ್ನು ಸಂಬಂಧಪಟ್ಟ ಇಲಾಖೆಯಲ್ಲಿ ಜಮಾ ಮಾಡಲು ನಿರ್ಣಯ ತೆಗೆದುಕೊಂಡಿದ್ದು ಇರುತ್ತದೆ. ವಾಸ್ತವವಾಗಿ ದಿನಾಂಕ: 20/06/2017 ರಂದು ಡಿ.ಡಿ ನಂ.010748 ರೂ.10,91,560/- ಕಾರ್ಮಿಕ ಇಲಾಖೆಗೆ ಜಮಾ ಮಾಡಿದ್ದು, ಈ ಬಗ್ಗೆ ದೂರುದಾರರಿಗೆ ದಿನಾಂಕ: 09/11/2018 ರಂದು ತಿಳಿಸಲಾಗಿತ್ತು. ಆದ್ದರಿಂದ, ಯಾವುದೇ ಹಣ ದುರುಪಯೋಗ ಆಗಿರುವುದಿಲ್ಲವೆಂದು ತಿಳಿಸಿರುತ್ತಾರೆ. ಆದ್ದರಿಂದ, ದೂರಿನಲ್ಲಿ ಹೇಳಿದ ವಿಷಯ ಸತ್ಯಕ್ಕೆ ದೂರವಾಗಿರುತ್ತದೆ ಅಂತಾ ಹೇಳಿರುತ್ತಾರೆ ಮತ್ತು ತಾವು ಯಾವುದೇ ಕರ್ತವ್ಯ ಲೋಪ ಎಸಗಿರುವುದಿಲ್ಲ ಅಂತಾ ಹೇಳಿರುತ್ತಾರೆ.

8. ಈ ವಿಚಾರಣೆಯಲ್ಲಿ, ಆ.ಸ.ನೌ.ರವರ ವಿರುದ್ಧ ಆರೋಪಿಸಲಾದ ಆರೋಪಕ್ಕೆ ಸಂಬಂಧಿಸಿದಂತೆ, ಶಿಸ್ತು ಪ್ರಾಧಿಕಾರವು ತಮ್ಮ ಪರವಾಗಿ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ಸಾಕ್ಷ್ಯ ಮಾಡಿಸಿದ್ದು, ನಿ.ಪಿ.1 ರಿಂದ 6 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ-1 ರವರು ತಮ್ಮನ್ನು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ನಿ.ಡಿ.1 ರಿಂದ ನಿ.ಡಿ.7 ರವರೆಗಿನ ದಾಖಲಾತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಆ.ಸ.ನೌ-2 ರವರು ತಮನ್ನು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿರುತ್ತಾರೆ.

9. ಉಭಯ ಪಕ್ಷದವರ ಪರವಾಗಿ ವಾದ ವಿವಾದವನ್ನು ಪರಿಶೀಲಿಸಲಾಯಿತು. ಆ.ಸ.ನೌ ರವರುಗಳು ತಮ್ಮ ಲಿಖಿತ ವಾದವನ್ನು ಮಂಡಿಸಿರುತ್ತಾರೆ.

10. ಈ ಕೆಳಕಂಡ ಅಂಶಗಳು ನನ್ನ ನಿರ್ಣಯಕ್ಕೆ ಉದ್ಭವಿಸಿರುತ್ತವೆ.

**ಅಂಶ–1:** ವಿಚಾರಣಾ ಪ್ರಾಧಿಕಾರವು ಆ.ಸ.ನೌರವರುಗಳ ಮೇಲೆ ಆಪಾದಿಸಲಾದ ಆರೋಪಗಳನ್ನು ರುಜುವಾತುಪಡಿಸಿದೆಯೇ?

**ಅಂಶ–2:** ಆದೇಶವೇನು?

11. ವಾದ ವಿವಾದದ ನಂತರ ಕಡತವನ್ನು ಪರಿಶೀಲಿಸಲಾಯಿತು ಮತ್ತು ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯವನ್ನು ಪರಿಶೀಲಿಸಲಾಯಿತು.

12. ಮೇಲ್ಕಂಡ ಪ್ರಶ್ನೆಗಳಿಗೆ ಕೆಳಗೆ ಚರ್ಚಿಸಿರುವ ಕಾರಣಗಳಿಂದ ಉತ್ತರವು ಈ ಕೆಳಕಂಡಂತಿವೆ.

**ಅಂಶ 1: ಭಾಗಶಃ ಸಕಾರಾತ್ಮಕವಾಗಿ**
**ಅಂಶ 2: ಅಂತಿಮ ಆದೇಶದಂತೆ.**

## ಕಾರಣಗಳು

13. ದೂರುದಾರರಾದ ಶ್ರೀ. ಕೆ.ಎಲ್ ಲಿಂಗರಾಜು ಬಿನ್ ಲೇಟ್ ಲಿಂಗನಾಯಕ, ಕುನಗಳ್ಳಿ ಗ್ರಾಮ, ಕೊಳ್ಳೇಗಾಲ ತಾಲ್ಲೂಕು, ಚಾಮರಾಜನಗರ ಜಿಲ್ಲೆ ಇವರು ತಮ್ಮ ದೂರನ್ನು ಸಲ್ಲಿಸಿರುತ್ತಾರೆ. ಈ ವಿಷಯದ ಬಗ್ಗೆ ಈಗಾಗಲೇ ಮೇಲ್ಕಂಡಂತೆ ಉಲ್ಲೇಖಿಸಲಾಗಿದೆ.

14. ಶಿಸ್ತು ಪ್ರಾಧಿಕಾರ ದೂರುದಾರರನ್ನು ಪಿ.ಡಬ್ಲ್ಯೂ.1 ಎಂದು ನುಡಿಸಾಕ್ಷಿ ಮಾಡಿದ್ದು, ತಮ್ಮ ಮುಖ್ಯ ವಿಚಾರಣೆಯಲ್ಲಿ ನಿ.ಪಿ.1 ರಿಂದ ನಿ.ಪಿ.6 ರವರೆಗಿನ ದಾಖಲಾತಿಗಳನ್ನು ಗುರುತಿಸಿಕೊಂಡಿರುತ್ತಾರೆ. ನಿ.ಪಿ.1 ದೂರು; ನಿ.ಪಿ.2 ಮತ್ತು 3 ಫಾರಂ ನಂ.1 ಮತ್ತು 2; ನಿ.ಪಿ.4 ದೂರುದಾರರು ಸಾರ್ವಜನಿಕ ಮಾಹಿತಿ ಅಧಿಕಾರಿ ನಗರಸಭೆ ಚಾಮರಾಜನಗರ ಇವರಿಂದ ಮಾಹಿತಿ ಹಕ್ಕು ಅಧಿನಿಯಮದ ಅಡಿಯಲ್ಲಿ ಮಾಹಿತಿ ಪಡೆದುಕೊಂಡಿದ್ದ ಪ್ರತಿ; ನಿ.ಪಿ.5 ಆಡಿಟ್ ವರದಿಯ 2 ಪುಟಗಳು ಮತ್ತು ನಿ.ಪಿ.6 ರಾಜ್ಯ ಮಾಹಿತಿ ಆಯುಕ್ತರು, ಬೆಂಗಳೂರು ರವರು

ಕ.ಮಾ.ಅ/8388/ಎಪಿಎಲ್/2018 ರಲ್ಲಿ ಮಾಡಿದ ಆದೇಶದ ಪ್ರತಿಯನ್ನು ಗುರುತುಪಡಿಸಲಾಗಿರುತ್ತದೆ. ದೂರುದಾರರು ತಮ್ಮ ಮುಖ್ಯ ವಿಚಾರಣೆಯಲ್ಲಿ ಆಡಿಟ್ ವರದಿಯ ಪ್ರಕಾರ ಕನಿಷ್ಠ ರೂ.25 ಲಕ್ಷ ಸರ್ಕಾರಕ್ಕೆ ಜಮಾ ಮಾಡಬೇಕಾಗಿದ್ದು, ಸದರಿ ಹಣ ಕಾರ್ಮಿಕ ಕಲ್ಯಾಣ ಇಲಾಖೆ, ಚಾಮರಾಜನಗರ ಅಭಿವೃದ್ಧಿ ಪ್ರಾಧಿಕಾರಕ್ಕೆ ಸಂಬಂಧಿಸಿದ್ದು, ಅದರಲ್ಲಿ ರೂ.10,91,560/–ಗಳನ್ನು ಕಾರ್ಮಿಕ ಕಲ್ಯಾಣ ನಿಧಿಗೆ ಜಮಾ ಮಾಡಿರುತ್ತಾರೆ, ಉಳಿದ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ನುಡಿದಿರುತ್ತಾರೆ. ನಿ.ಪಿ.1ರ ದೂರನ್ನು ಪರಿಶೀಲಿಸಿದಾಗ ಅದರಲ್ಲಿ ಆ.ಸ.ನೌ–1 ಮತ್ತು 2 ರವರು 2016–17ನೇ ಸಾಲಿನಲ್ಲಿ ಕಾರ್ಮಿಕ ಕಲ್ಯಾಣ ಇಲಾಖೆಗೆ ಸಂಬಂಧಪಟ್ಟಂತೆ ರೂ.15 ಲಕ್ಷ ಹಣವನ್ನು ದುರುಪಯೋಗಪಡಿಸಿಕೊಂಡಿರುತ್ತಾರೆ ಅಂತಾ ಮಾತ್ರ ಹೇಳಿರುತ್ತಾರೆ.

15. ನಿ.ಪಿ.4 ದೂರುದಾರರು ದಿನಾಂಕ: 09/11/2018 ರಲ್ಲಿ ಮಾಹಿತಿ ಹಕ್ಕು ಅಧಿನಿಯಮದಲ್ಲಿ ಚಾಮರಾಜನಗರ ಜಿಲ್ಲೆ ಆಡಿಟ್ ಕಛೇರಿಯಲ್ಲಿ ಮಾಹಿತಿ ನೀಡಿದಂತೆ ನಗರಸಭೆ ಕಾರ್ಯಾಲಯ ಚಾಮರಾಜನಗರ ಇವರ ಕಛೇರಿಯಲ್ಲಿ ಕಟ್ಟಡ ಪರವಾನಿಗೆಯಲ್ಲಿ ವಸೂಲಿ ಮಾಡಿದ ಕರ ರೂ.38,450/–; ಕೊಳಚೆ ನಿರ್ಮೂಲನಾ ಕರ, ರೂ.98,450/– ಚಾಮರಾಜನಗರ ನಗರಾಭಿವೃದ್ಧಿ ಪ್ರಾಧಿಕಾರ (ಚೂಡಾ) ಕರ ಹಾಗೂ ರೂ.10,91,560/– ಗಳನ್ನು ಕಾರ್ಮಿಕ ಕಲ್ಯಾಣ ಕರ, ಈ ಎಲ್ಲಾ ಹಣದ ಬಗ್ಗೆ ಸಂಬಂಧಪಟ್ಟಂತೆ ಇಲಾಖೆಗೆ ಜಮಾ ಮಾಡಿರುವ ರಶೀದಿಗಳನ್ನು ನೀಡಲು ಕೇಳಿಕೊಂಡಿರುತ್ತಾರೆ. ಆ ಪ್ರಕಾರ ಸಾರ್ವಜನಿಕ ಮಾಹಿತಿ ಅಧಿಕಾರಿ ನಗರಸಭೆ ಚಾಮರಾಜನಗರ ಇವರು ಮಾಹಿತಿಯನ್ನು ನೀಡಿದ್ದು, ಮಾಹಿತಿಯಲ್ಲಿ ದಿನಾಂಕ: 20/06/2017 ರಂದು ಡಿ.ಡಿ ನಂ.010748 ರೂ.10,91,560/– ಮೂಲಕ ನಗರಸಭೆ ಕಾರ್ಯಾಲಯ ಚಾಮರಾಜನಗರ ಕಛೇರಿಯಿಂದ ಕಾರ್ಮಿಕ ಕಲ್ಯಾಣ ಇಲಾಖೆಗೆ ಜಮಾ ಮಾಡಲಾಗಿದ್ದು, ಉಳಿದಂತೆ ಕೊಳಚೆ ನಿರ್ಮೂಲನಾ ಕರ ರೂ.38,450/– ಹಾಗೂ ಚೂಡಾ ಕರ ರೂ.98,540/–ಗಳನ್ನು ಚೂಡಾದಿಂದ ನಗರಸಭೆಗೆ ಬರಬೇಕಾದ ಬಾಕಿ ಮೊತ್ತಕ್ಕೆ ಹೊಂದಾಣಿಕೆ ಮಾಡಿಕೊಳ್ಳಲು ಕ್ರಮವಹಿಸಲಾಗಿದೆ ಅಂತಾ ತಿಳಿಸಿರುತ್ತಾರೆ.

16. ನಿ.ಪಿ.5 ಆಡಿಟ್ ವರದಿಯಲ್ಲಿ 2 ಪುಟಗಳನ್ನು ಹಾಜರುಪಡಿಸಿದ್ದು ಇರುತ್ತದೆ. ನಿ.ಪಿ.5ರ ಪ್ರಕಾರ ಪ್ಯಾರಾ ನಂ.19ರಲ್ಲಿ ಚಾಮರಾಜನಗರ ಕಟ್ಟಡ ಪರವಾನಿಗೆಗೆ ಸಂಬಂಧಿಸಿದಂತೆ ಕಡತಗಳನ್ನು ಪರಿಶೀಲಿಸಲಾಗಿ, ಕಟ್ಟಡದ ಪರವಾನಿಗೆ ಅರ್ಜಿದಾರರಿಂದ 2016–17ನೇ ಸಾಲಿನಲ್ಲಿ ರೂ.38,450/– ಕೊಳಚೆ ನಿರ್ಮೂಲನಾ ಕರ; ಚೂಡಾ ಕರ ರೂ.98,540/– ಹಾಗೂ ಕಾರ್ಮಿಕ ಕಲ್ಯಾಣ ಕರ ರೂ.10,91,560/–ಗಳನ್ನು ವಸೂಲಿ ಮಾಡಿರುವುದು ಕಂಡುಬಂದಿದ್ದು, ಸದರಿ ಕರಗಳನ್ನು ಸಂಬಂಧಿಸಿದ ಇಲಾಖೆಗಳಿಗೆ ಜಮಾ ಮಾಡದಿರುವುದು ಕಂಡುಬಂದಿದ್ದು, ಈ ಸಂಬಂಧ ಸದರಿ ಕರಗಳನ್ನು ಜಮಾ ಮಾಡಿ ವಿವರಗಳನ್ನು ಲೆಕ್ಕ ಪರಿಶೀಲನೆಗೆ ಹಾಜರುಪಡಿಸುವಂತೆ ಆಡಿಟ್ ವಿಚಾರಣಾ ಸಂಖ್ಯೆ: 25/2017–18 ದಿನಾಂಕ: 29/05/2017ರಲ್ಲಿ ವಿಚಾರಣೆಯನ್ನು ನೀಡಿದ್ದರೂ ಸಹ ಯಾವುದೇ ವಿವರಗಳನ್ನು ಲೆಕ್ಕ ಪರಿಶೀಲನೆಗೆ ಹಾಜರುಪಡಿಸಿರುವುದಿಲ್ಲ. ಕಾರ್ಮಿಕ ಕಲ್ಯಾಣ ನಿಧಿ ಬಾಬ್ತು ರೂ.10,91,560/–ಗಳನ್ನು ಚೆಕ್ ಮೂಲಕ ಜಮಾ ಮಾಡಿದ್ದು, ಉಳಿದ ಹಣ ವಸೂಲಿ ಮಾಡಿ ಸಂಬಂಧಿಸಿದ ಖಾತೆಗೆ ಜಮಾ ಮಾಡಿಕೊಳ್ಳಲು ಸೂಚಿಸಲಾಗಿದೆ ಅಂತಾ ನಮೂದು ಇರುತ್ತದೆ.

17. ನಿ.ಪಿ.6 ರಾಜ್ಯ ಮಾಹಿತಿ ಆಯುಕ್ತರು, ಬೆಂಗಳೂರು ಇವರು ದೂರುದಾರರು ಕೇಳಿದ ಮಾಹಿತಿಯನ್ನು ಪರಿಶೀಲಿಸಿ ಅವರಿಗೆ ಸೂಕ್ತ ಮಾಹಿತಿಯನ್ನು ನೀಡಲು ಆದೇಶಿಸಿದ್ದು ಇರುತ್ತದೆ.

18. ಈ ವಿಚಾರಣೆಯಲ್ಲಿ ಆ.ಸ.ನೌ–1 ಇವರು ಡಿ.ಡಬ್ಲ್ಯೂ.1 ಎಂದು ಸಾಕ್ಷಿ ನುಡಿದಿದ್ದು, ಅವರು ತಮ್ಮ ಪರವಾಗಿ ನಿ.ಡಿ.1 ರಿಂದ ನಿ.ಡಿ.7 ರವರಗಿನ ದಾಖಲತಿಗಳನ್ನು ಗುರುತುಪಡಿಸಿಕೊಂಡಿರುತ್ತಾರೆ. ಸದರಿಯವರು ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿ 2016–17ನೇ ಸಾಲಿನಲ್ಲಿ ಕಟ್ಟಡ ಪರವಾನಿಗೆ ಸಂಬಂಧ ರೂ.38,450/–ಗಳನ್ನು ಚೆಕ್ ನಂ.136565 ಹಣವನ್ನು ಕಾರ್ಮಿಕ ಇಲಾಖೆಗೆ ಜಮಾ ಮಾಡಿದ್ದು ಅಲ್ಲದೇ ರೂ.98,540/–ಗಳನ್ನು ಚೆಕ್ ನಂ.138809 ಹಣವನ್ನು ಕಾರ್ಮಿಕ ಇಲಾಖೆಗೆ ಜಮಾ ಮಾಡಿರುತ್ತೇನೆ ಅಂತಾ ನುಡಿದಿರುತ್ತಾರೆ. ಎಲ್ಲಾ ಹಣವನ್ನು ತುಂಬಿದ್ದರಿಂದ ತಾನು ಯಾವುದೇ ತಪ್ಪು ಮಾಡಿರುವುದಿಲ್ಲ ಅಂತಾ ಹೇಳಿರುತ್ತಾರೆ. ಆ.ಸ.ನೌ–2 ರವರು ಡಿ.ಡಬ್ಲ್ಯೂ.2 ಎಂದು ಸಾಕ್ಷಿ ನುಡಿದಿದ್ದು, ಇವರು

ಸಹ ಆ.ಸ.ನೌ–1 (ಡಿ.ಡಬ್ಲ್ಯೂ.1) ರಂತೆ ಸಾಕ್ಷಿ ನುಡಿದಿರುತ್ತಾರೆ. ನಿ.ಡಿ.1ರಲ್ಲಿ ನಗರಸಭೆ ಕಾರ್ಯಾಲಯ ಚಾಮರಾಜನಗರ 2016–17ನೇ ಸಾಲಿನ ಕಟ್ಟಡದ ಪರವಾನಿಗೆ ಸಂಬಂಧ ವಸೂಲಾಗಿರುವ ಕರಗಳನ್ನು ಸಂಬಂಧಿಸಿದ ಇಲಾಖೆಗೆ ಜಮಾ ಮಾಡಿದ ವಿವರ ಇರುತ್ತದೆ. ಕೊಳಚೆ ನಿರ್ಮೂಲನಾ ಕರ ರೂ.38,450/–ಗಳನ್ನು ನಂ.136565 ಹಣವನ್ನು ಕಾರ್ಮಿಕ ಇಲಾಖೆಗೆ ದಿನಾಂಕ: 20/06/2020 ರಂದು (ಒಟ್ಟು ರೂ.83,335/– 2016–17 ಮತ್ತು 2017–18 ಸಾಲಿಗಾಗಿ) ಚೂಡಾ ಕರ ರೂ.98,540/– ಗಳನ್ನು ಚೆಕ್ ನಂ.138809 ದಿನಾಂಕ: 10/02/2022 ರಂದು ತುಂಬಿರುತ್ತಾರೆ ಅಂತಾ ನಮೂದು ಇರುತ್ತದೆ.

19. ನಿ.ಡಿ.2 ಮತ್ತು 7 ಆಯುಕ್ತರು, ನಗರಸಭೆ, ಚಾಮರಾಜನಗರ ಇವರು ಬ್ರಾಂಚ್ ಮ್ಯಾನೇಜರ್, ಆಕ್ಸಿಸ್ ಬ್ಯಾಂಕ್, ಚಾಮರಾಜನಗರ ಇವರಿಗೆ, ನಗರಸಭೆ ಕಾರ್ಯಾಲಯ ಚಾಮರಾಜನಗರ ಎಸ್.ಬಿ.ಐ ಖಾತೆಯಿಂದ ಕೊಳಚೆ ನಿರ್ಮೂಲನಾ ಮಂಡಳಿ ರವರಿಗೆ ರೂ.83,335/– ಗಳನ್ನು ವರ್ಗಾವಣೆ ಮಾಡಲು ಪತ್ರ ಬರೆದಿದ್ದು ಇರುತ್ತದೆ ಹಾಗೂ ರೂ.1,07,540/–ಗಳನ್ನು ವರ್ಗಾವಣೆ ಮಾಡಲು ಬರೆದುಕೊಂಡ ಪತ್ರಗಳು ಇರುತ್ತದೆ.

20. ನಿ.ಡಿ.3 ಕಟ್ಟಡ ಪರವಾನಿಗೆ ವಸೂಲಿ ಕರ ನಗರಸಭೆ ಚಾಮರಾಜನಗರ ಇವರು ಮಾಡಿಕೊಂಡ ದಿನಾಂಕ: 01/04/2016 ರಿಂದ 31/03/2017 ರವರೆಗೆ ಅಂಕಿ–ಅಂಶಗಳ ಪಟ್ಟಿ, ನಿ.ಡಿ.4 ರಿಂದ 6 ಇವುಗಳು ರೂ.10,91,560/–ಗಳನ್ನು ಚೆಕ್ ಮೂಲಕ ಕಾರ್ಮಿಕ ಇಲಾಖೆ, ಬೆಂಗಳೂರು ಹಣ ಸಂದಾಯ ಮಾಡಿದ ಬಗ್ಗೆ ಪತ್ರ ಹಾಗೂ ಚೆಕ್‌ನ ನಕಲು ಪ್ರತಿ ಇರುತ್ತದೆ.

21. ಮೇಲಿನ ಸಾಕ್ಷಿ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿದಾಗ ರೂ.10,91,560/–ಗಳನ್ನು ಕಟ್ಟಡ ಪರವಾನಿಗೆ ಕರ ವಸೂಲಿ ಮಾಡಿದ್ದು ಅದೇ ಸಾಲಿನಲ್ಲಿ ಅಂದರೆ 2016–17ನೇ ಸಾಲಿನಲ್ಲಿ ಜಮಾ ಮಾಡಿದ್ದು ಇರುತ್ತದೆ. ಈ ಬಗ್ಗೆ ದೂರುದಾರರು ತಮ್ಮ ಮುಖ್ಯ ವಿಚಾರಣೆ ಹಾಗೂ ಪಾಟಿಸವಾಲಿನಲ್ಲಿ ಒಪ್ಪಿಕೊಂಡಿರುತ್ತಾರೆ. ಈಗ ಉಳಿದ ಹಣ ಅಂದರೆ ರೂ.38,450/– ಹಾಗೂ ರೂ.98,540/– ಈ ಹಣವನ್ನು 2016–17ನೇ ಸಾಲಿನಲ್ಲಿ ಜಮಾ ಮಾಡಿರುವುದಿಲ್ಲ ಅಂತಾ ಶಿಸ್ತು

ಪ್ರಾಧಿಕಾರದ ವಾದ ಇರುತ್ತದೆ. ಆ.ಸ.ನೌ–1 ಇವರು ಹಾಜರುಪಡಿಸಿದ ದಾಖಲಾತಿಗಳನ್ನು ಅಂದರೆ ನಿ.ಡಿ.1ನ್ನು ಪರಿಶೀಲಿಸಿದಾಗ ರೂ.38,450/– ದಿನಾಂಕ: 20/06/2020 ರಂದು ಹಾಗೂ ರೂ.98,540/–ಗಳನ್ನು ದಿನಾಂಕ: 10/02/2022 ರಂದು ಜಮಾ ಮಾಡಿರುತ್ತಾರೆ. ಸದರಿ ಹಣ ರೂ.38,450 + ರೂ.98,540 ಒಟ್ಟು ರೂ.1,36,990/– ಈ ಹಣವನ್ನು 2016–17ನೇ ಸಾಲಿನಲ್ಲಿ ವಸೂಲಿ ಆಗಿದ್ದರೂ ಸಹಿತ ಅದೇ ವರ್ಷದಲ್ಲಿ ಜಮಾ ಮಾಡದೇ 2020 ಮತ್ತು 2022ರಲ್ಲಿ ಜಮಾ ಮಾಡಿದ್ದು, ಆ.ಸ.ನೌ–1 ರವರು ಸಲ್ಲಿಸಿದ ದಾಖಲಾತಿಗಳಿಂದಲೇ ಕಂಡು ಬರುತ್ತದೆ. 2016–17ನೇ ಸಾಲಿನಲ್ಲಿ ಜಮಾ ಮಾಡದೇ ತಡ ಮಾಡಿ ಜಮಾ ಮಾಡಿದ ಬಗ್ಗೆ ಆ.ಸ.ನೌ–1 ಮತ್ತು 2 ಇವರುಗಳು ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ತಮ್ಮ ಲಿಖಿತ ವಾದ ಮಂಡನೆಯನ್ನು ಸಲ್ಲಿಸಿದ್ದು, ಅದರಲ್ಲಿಯೂ ಸಹ ಈ ಮೇಲಿನ ವಿಷಯನ್ನು ಹೇಳಿರುತ್ತಾರೆ. ಲಿಖಿತ ವಾದ ಪತ್ರದ ಜೊತೆಗೆ ದಾಖಲಾತಿಗಳಾದ Municipal General Fund balance belongs to CMC, Chamarajanagar for a period as on 31/03/2018 ರಿಂದ 28/02/2022 ಸಲ್ಲಿಸಿದ್ದು ಇರುತ್ತದೆ. ಅಲ್ಲದೇ, ಸದರಿ ನಗರಸಭೆಯ ಎಸ್.ಬಿ.ಐ ಖಾತೆಯ ಆಕ್ಸಿಸ್ ಬ್ಯಾಂಕ್‌ನ Statement of Accounts 01/03/2018 ರಿಂದ 28/02/2022 ರವರೆಗೆ ಸಲ್ಲಿಸಿದ್ದು, ಅವು ಈ ವಿಚಾರಣೆಗೆ ಸಂಬಂಧಿಸಿದ್ದು ಇರುವುದಿಲ್ಲ ಮತ್ತು ಅವುಗಳನ್ನು ಯಾವ ಕಾರಣಕ್ಕಾಗಿ ಸಲ್ಲಿಸಿರುತ್ತಾರೆ ಅಂತಾ ತಮ್ಮ ವಾದ ಮಂಡನೆಯಲ್ಲಿ ಹೇಳಿರುವುದಿಲ್ಲ.

22.ಈ ಮೇಲ್ಕಂಡ ಕಾರಣಗಳಿಂದ, ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ವಿಚಾರಣಾ ಪ್ರಾಧಿಕಾರವು ಭಾಗಶಃ ರುಜುವಾತುಪಡಿಸಿರುತ್ತದೆ ಎಂದು ನಿರ್ಣಯಕ್ಕೆ ಬಂದು ಅಂಶ–1ನ್ನು ಆ.ಸ.ನೌ–1 ಮತ್ತು 2 ರವರುಗಳ ವಿರುದ್ಧ ಭಾಗಶಃ ಸಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

23. **ಅಂಶ–2: ಈ ಮೇಲ್ಕಂಡ ಕಾರಣಗಳಿಗಾಗಿ, ಈ ಕೆಳಕಂಡಂತೆ ನಿರ್ಣಯಿಸಲಾಗಿದೆ.**

## ನಿರ್ಣಯ

ಶಿಸ್ತು ಪ್ರಾಧಿಕಾರದವರು ಆಪಾದಿತ ಆ.ಸ.ನೌ – (1) **ಶ್ರೀ. ಎಂ ರಾಜಣ್ಣ,** ಪೌರಾಯುಕ್ತರು (ಮೂಲತಃ ಸಮುದಾಯ ಸಂಘಟನಾಧಿಕಾರಿ), ನಗರಸಭೆ, ಚಾಮರಾಜನಗರ ಮತ್ತು (2) **ಶ್ರೀ. ಎಂ.ಜಿ. ರಮೇಶ್,** ವ್ಯವಸ್ಥಾಪಕರು, ಪುರಸಭೆ, ಗುಂಡ್ಲುಪೇಟೆ, ಚಾಮರಾಜನಗರ ಜಿಲ್ಲೆ ಇವರುಗಳ ವಿರುದ್ಧ ಆಪಾದಿಸಲಾದ ಆರೋಪಗಳನ್ನು ಭಾಗಶಃ ರುಜುವಾತುಪಡಿಸಿರುತ್ತದೆ ಅಂದರೆ 2016–17ನೇ ಸಾಲಿನಲ್ಲಿ ವಸೂಲಿಯಾದ ರೂ.1,36,190/–ಗಳನ್ನು 2020 ಮತ್ತು 2022ನೇ ಸಾಲಿನಲ್ಲಿ ನಿಧಾನಗತಿಯಿಂತ ಜಮಾ ಮಾಡಿರುವುದನ್ನು ಮಾತ್ರ ರುಜುವಾತುಪಡಿಸಿರುತ್ತದೆ.

**ಆ.ಸ.ನೌ–1 ರವರ ನಿವೃತ್ತಿ ದಿನಾಂಕ: 31/07/2028 ಮತ್ತು ಆ.ಸ.ನೌ–2 ರವರ ನಿವೃತ್ತಿ ದಿನಾಂಕ: 31/05/2020 ಆಗಿರುತ್ತದೆ.**

ಈ ವರದಿಯನ್ನು ಮಾನ್ಯ ಉಪಲೋಕಾಯುಕ್ತ ರವರಿಗೆ ಮುಚ್ಚಿದ ಲಕೋಟೆಯಲ್ಲಿ ಸಲ್ಲಿಸುವಂತೆ ಕಛೇರಿಗೆ ಆದೇಶಿಸಲಾಗಿದೆ.

23/5

**(ಸುದೇಶ್ ರಾಜಾರಾಮ್ ಪರದೇಶಿ)**
ಅಪರ ನಿಬಂಧಕರು ವಿಚಾರಣೆಗಳು–14,
ಕರ್ನಾಟಕ ಲೋಕಾಯುಕ್ತ,
ಬೆಂಗಳೂರು.

## ANNEXURES

| Sl. No. | Particulars of Documents | |
|---|---|---|
| 1 | **Witness examined on behalf of the Disciplinary Authority** | |
| | **PW-1** | Sri. K.L Lingaraju S/o Linganaik, Kollegala Taluk, Chamarajanagar. |
| 2 | **Documents marked on behalf of the Disciplinary Authority Ex.P-1 to Ex.P-6** | |
| | **Ex.P.1 & 1(a)** | Complaint given to this institution dtd: 08/01/2019 with Signature. |
| | **Ex.P.2& 2(a)** | Form No.1 with Signature. |
| | **Ex.P.3& 3(a)** | Form No.2 with Signature (Affidavit). |
| | **Ex.P.4** | Information dtd: 09/11/2018 secured under RTI Act. |
| | **Ex.P.5** | Audit report. |
| | **Ex.P.6** | Order dtd: 23/11/2018 of Commissioner, State Information. |
| 3 | **Witness examined on behalf of the DGO, Documents marked on behalf of the DGO** | |
| | **DW-1** | Sri. M. Rajanna S/o Late C. Mahadevappa, Municipal Commissioner, CMC, Nanjangudu. |
| | **DW-2** | Sri. Ramesh M.G S/o Late M.S Ganapathi, Rtd. Municipal Commissioner, Madikeri. |
| 4 | **Documents marked on behalf of the DGOs through the complainant** | |
| | **Ex.D.1** | Details of amount deposited for the year 2016-17. |
| | **Ex.D.2** | Letter dtd: 23/06/2020 addressed to Branch |

| | | |
|---|---|---|
| | | Manager, Axis Bank, Chamarajanagar. |
| | **Ex.D.3** | Building licence report of CMC Chamarajanagar from 01/04/16 to 31/03/17. |
| | **Ex.D.4** | Letter dtd: 20/06/2017 addressed to CEO, Karmika Bhavan, Bengaluru. |
| | **Ex.D.5** | Copy of DD. |
| | **Ex.D.6** | Receipt. |
| | **Ex.D.7** | Letter dtd: 11/02/2022 addressed to Branch Manager, Axis Bank, Chamarajanagar. |

Dated this the 23rd May, 2022

23/5

**(SUDESH RAJARAM PARADESHI)**
Additional Registrar Enquiries-14,
Karnataka Lokayukta,
Bangalore.